# ಯಶಸ್ಸಿನ ದಾರಿಯಲ್ಲಿ ಒಂಟಿ ಹೆಣ್ಣು ಸ್ಪೈಡ್‌ವಿಂಗ್‌ನಲ್ಲಿ ಅನುಮಾನದ ಕಣ್ಣು

**ವೃತ್ತಿಜೀವನದಲ್ಲಿ ಯಶಸ್ವಿಯಾದ ಪುರುಷರು ವೈಯಕ್ತಿಕ ಜೀವನದಲ್ಲೂ ಸುಖಸಂತೋಷ ಹೊಂದಿರುವ ಸಾಧ್ಯತೆಗಳು ಹೆಚ್ಚು. ಯಶಸ್ವಿ ಪುರುಷನಿಗೆ ವೃತ್ತಿ ಸ್ಥಳದಲ್ಲಿ ಮನ್ನಣೆ ದೊರೆತಂತೆ, ಸಮಾಜ ಹಾಗೂ ಕುಟುಂಬದಲ್ಲೂ ಗೌರವ ಲಭಿಸುತ್ತದೆ. ಯಶಸ್ವಿ ಮಹಿಳೆಯ ಸ್ಥಿತಿ ಹಾಗಲ್ಲ. ಹೆಣ್ಣು ಯಶಸ್ಸಿನ ಏಣಿ ಏರಿದಷ್ಟೂ ಅನುಮಾನದ ಕಣ್ಣುಗಳು ಅವಳನ್ನು ಹಿಂಬಾಲಿಸುತ್ತವೆ. ಮಹಿಳೆಯ ವೃತ್ತಿಪರ ಏಳಿಗೆಯನ್ನು ಸಮಾಜ ಪ್ರಾಂಜಲವಾಗಿ ಕಾಣುವುದಿರಲಿ, ಆ ಯಶಸ್ಸು ಬಹುತೇಕ ಸಂದರ್ಭಗಳಲ್ಲಿ ಸಂಗಾತಿಗೇ ಅರಗಿಸಿಕೊಳ್ಳಲು ಕಷ್ಟವಾಗುತ್ತದೆ. ಹೆಣ್ಣಿನ ಕುರಿತ ಸಮಾಜದ ಪೂರ್ವಗ್ರಹಗಳು, ಆಕೆಯ ಯಶಸ್ಸಿನ ಸಂದರ್ಭದಲ್ಲೂ ಕೆಲಸ ಮಾಡುತ್ತವೆ. ಈ ಪೂರ್ವಗ್ರಹವೇ, ವೃತ್ತಿ–ಪ್ರವೃತ್ತಿಯಲ್ಲಿ ಸಾಧನೆ ಮಾಡಿದ ಹೆಚ್ಚಿನ ಯಶಸ್ವಿ ಮಹಿಳೆಯರು ವೈಯಕ್ತಿಕ ಜೀವನದಲ್ಲಿ ಒಂಟಿಯಾಗಿರಲು ಕಾರಣವಾಗುತ್ತದೆ. ಯಶಸ್ವಿ ಮಹಿಳೆಯರ ಒಂಟಿತನಕ್ಕೆ ವಸ್ತುನಿಷ್ಠ ನೆಲೆಯಲ್ಲಿ ಕಾರಣಗಳನ್ನು ಪರಿಶೀಲಿಸುವ ಈ ವಿಶ್ಲೇಷಣೆ, ಸಮಾಜದ ರೂಢಿಗತ ಮನೋಭಾವ ಬದಲಾಗಬೇಕಾದ ಅಗತ್ಯವನ್ನು ಸೂಚಿಸುತ್ತಿದೆ.**

■ ಡಾ. ಪ್ರೇಮಲತ ಬಿ.

ಯಶಸ್ಸಿನ ಬಗ್ಗೆ ಎಲ್ಲರೂ ತುಡಿಯುವುದು ಸಹಜ. ಆದರೆ, ಅಂತಹ ಯಶಸ್ಸು ಸುಲಭವಾಗಿ ಲಭಿಸುವುದಿಲ್ಲ. ಅದು ತ್ಯಾಗವನ್ನು ಬೇಡುತ್ತದೆ. ಕಠಿಣ ಶ್ರಮವನ್ನು ನಿರೀಕ್ಷಿಸುತ್ತದೆ. ಅದೆಲ್ಲದ್ದಕ್ಕಿಂತಲೂ ಹೆಚ್ಚಾಗಿ ಅಪಾರ ಸಮಯ ವ್ಯಯಿಸಲಿ ಎಂಬ ನಿರೀಕ್ಷೆ ಹೊಂದಿರುತ್ತದೆ. ಒಂದು ಮಟ್ಟದ ಯಶಸ್ಸನ್ನು ಸಾಧಿಸಿದ ನಂತರ ಮೇಲಿನ ಸ್ತರದ ಗುರಿಗಳನ್ನು ಮುಟ್ಟಲು ದಾರಿಗಳು ತೆರೆದುಕೊಂಡು ಇನ್ನಷ್ಟು ಬದ್ಧತೆಗಳನ್ನು ನಿರೀಕ್ಷಿಸುತ್ತದೆ. ಎಲ್ಲಿಯವರೆಗೆ ಮುಂದುವರೆಯಬೇಕೆನ್ನುವುದು ಅವರವರ ನಿರೀಕ್ಷೆ ಅಥವಾ ಅವರವರ ಮಹತ್ವಾಕಾಂಕ್ಷೆಗಳನ್ನು ಅವಲಂಬಿಸುತ್ತದೆ.

ಆದರೆ, ಅವರವರ ನಿರೀಕ್ಷೆಗೆ ತಕ್ಕಂತೆ ಇಂತಹ ಗುರಿಗಳನ್ನು ಮುಟ್ಟಿದ ನಂತರ ಜನರು ಎಷ್ಟು ಖುಷಿಯಾಗಿರಬಲ್ಲರು ಎಂಬ ವಿಚಾರ ಮಾತ್ರ ಆ ವ್ಯಕ್ತಿ ಗಂಡೋ ಹೆಣ್ಣೋ ಎಂಬ ವಿಚಾರವನ್ನು ಅವಲಂಬಿಸಿರುವುದು ಬಹುದೊಡ್ಡ ವಿಪರ್ಯಾಸ. ಇಬ್ಬರ ಸಾಧನೆಗಳು ಸಮನಾಗಿದ್ದರೂ ಪುರುಷ ಅದರಿಂದ ಹೆಚ್ಚು ಸಂತೋಷವಾಗಿರುವುದನ್ನು, ಅದನ್ನು ಹೆಚ್ಚು ಘಂಟಾಘೋಷವಾಗಿ ಅನುಭವಿಸುವುದನ್ನು ಮತ್ತು ಹೆಣ್ಣು ಮತ್ತಷ್ಟು, ಮಗದಷ್ಟು ಒಂಟಿಯಾಗುವುದನ್ನು ನೋಡುತ್ತಿದ್ದೇವೆ. ಈ ವಿರೋಧಾಭಾಸದ ಬಗ್ಗೆ ಬಹಳಷ್ಟು ಅಧ್ಯಯನಗಳು ಕೂಡ ನಡೆದಿವೆ.

ತಮ್ಮ ವೃತ್ತಿಗಳಲ್ಲಿ ಉನ್ನತ ಹಂತವನ್ನು ಮುಟ್ಟಿದವರು, ತಮ್ಮದೇ ಸ್ವಂತ ಉದ್ಯಮದಲ್ಲಿ ಅಪಾರ ಯಶಸ್ಸನ್ನು ಕಂಡಿರುವ ಮಹಿಳೆಯರು ತಮ್ಮ ವೈಯಕ್ತಿಕ ಬದುಕಿನಲ್ಲಿ ಬಹಳ ಅಸಂತೋಷ ಅನುಭವಿಸುತ್ತಿರುವುದು ದೃಢಪಟ್ಟಿದೆ.

ಒಂದು ಅಧ್ಯಯನದಲ್ಲಿ, ಸುಮಾರು 600 ಜನರನ್ನು ಸಮೀಕ್ಷೆ ಮಾಡಿದಾಗ ಶೇ. 55ರಷ್ಟು ಮಹಿಳೆಯರು ತಾವು ಒಂಟಿತನ ಅನುಭವಿಸಿದೆವು ಎಂದರೆ, ಶೇ. 69ರಷ್ಟು ಮಹಿಳೆಯರು ಹಿರಿಯ ಹುದ್ದೆಗೆ ತಲುಪಿದ ನಂತರ ತಮಗೆ ದೊರೆಯಬೇಕಾದ ಬೆಂಬಲ ಸಿಗುತ್ತಿಲ್ಲ ಎಂದಿದ್ದಾರೆ. ತಮ್ಮ ಉದ್ಯಮಗಳಲ್ಲಿ ಯಶಸ್ಸು ದೊರೆತಂತೆಲ್ಲ ತಾವು ಸುಖಿಗಳಾದೆವು ಎಂದು ಪುರುಷರು ಹೇಳಿದರೆ, ಶೇ. 60ರಷ್ಟು ಮಹಿಳೆಯರು ತಾವು ಅಸುಖಿಗಳಾಗಿ ಮತ್ತಷ್ಟು ಒಂಟಿತನ ಅನುಭವಿಸುತ್ತಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಇನ್ನೂ ಅದೆಷ್ಟೋ ಜನರು 'ತಾವು ಸಾಧಾರಣ ಬುದ್ಧಿಮತ್ತೆಯ ಹುಡುಗಿಯರಾಗಿ ಹುಟ್ಟಿದ್ದರೆ ಹೆಚ್ಚು ಖುಷಿಯಿಂದ ಇರುತ್ತಿದ್ದೇವೇನೋ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಯಶಸ್ವಿ ಮಹಿಳೆಯರು ಹತ್ತುವ ಏಣಿಗಳನ್ನು ಮತ್ತು ಅವರು ಕಳೆದುಕೊಳ್ಳಬೇಕಾದ ಕೆಲವು ಸುಖಗಳನ್ನು ನೋಡುತ್ತಿರುವ ಮುಂದಿನ ತಲೆಮಾರಿನ ಹುಡುಗಿಯರು 'ಇಂತಹ ಯಶಸ್ಸು ಬೇಕೇ?' ಎನ್ನುವ ಗೊಂದಲಕ್ಕೆ ಬೀಳದಂತೆ ಯಶಸ್ವಿ ಮಹಿಳೆಯರು ತಮ್ಮ ಯಶಸ್ಸನ್ನು ನಿರ್ಣಯಿಸಬೇಕಾದ ಅಗತ್ಯವಿದೆ. ಅವರ ಅಸಂತೋಷಕ್ಕೆ ಕಾರಣಗಳೇನೆಂಬುದರ